ಇಂದು ದಿಃ **07-03-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಬಿ.ವಿ.ಆರ್ ವಕೀಲರಿಂದ ವಾದಿಯರ ಪರಃ

**ನಾನು, ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತವೆ.**

ಪ್ರಾಸ 1 ಇವರ ಮುಖಾಂತರ ಈಗಾಗಲೇ ನಿ.ಪಿ-1 ರಿಂದ 16 ದಾಖಲೆಗಳನ್ನು ನಿಶಾನೆಗೊಳಿಸಲಾಗಿದ್ದು, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಶ್ರೀ ಎಂ.ಸಿ.ಎಂ.ಟಿ ವಕೀಲರಿಂದ ಪ್ರತಿವಾದಿಯರ ಪರಃ**

ನಮ್ಮ ತಂದೆ ತಾಯಿಗೆ 3 ಜನ ಮಕ್ಕಳಲ್ಲಿ ನಾನೇ ದೊಡ್ಡವಳು ಎಂದರೆ ಸರಿ. ನಾನು 6 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. 2 ನೇ ವಾದಿ 8 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದಾಳೆ. ನನ್ನ ತಂದೆ ಮೂಲತಃ ಆಂದ್ರ ರಾಜ್ಯದಿಂದ ವಲಸೆ ಬಂದಿದ್ದರು. ನನ್ನ ತಂದೆ ಸುಮಾರು 60 ವರ್ಷಗಳ ಹಿಂದೆ ನಂದಿತಾವರೆಗೆ ವಲಸೆ ಬಂದರು. ನಾವೆಲ್ಲರೂ ಇಲ್ಲಿಯೇ ಹುಟ್ಟಿರುತ್ತೇವೆ. ನನ್ನ ತಂದೆಗೆ ಒಬ್ಬ ತಮ್ಮ ಮತ್ತು ತಂಗಿ ಇದ್ದರು. ನನ್ನ ತಂದೆ ಮತ್ತು ಅವರ ತಮ್ಮ ಇವರ ನಡುವೆ ಸುಮಾರು 40 ವರ್ಷಗಳ ಹಿಂದೆ ವಿಭಾಗ ಆಗಿರುತ್ತದೆ. ಆ ಪಾಲುವಿಭಾಗದಲ್ಲಿ ನನ್ನ ತಂದೆಗೆ 15 ಎಕರೆ ಆಸ್ತಿ ಬಂದಿರುತ್ತದೆ. ಈ 15 ಎಕರೆ ಆಸ್ತಿ ನಂದಿತಾವರೆ ಗ್ರಾಮದಲ್ಲಿ ಇತ್ತು. ನನ್ನ ತಂದೆ ಮತ್ತು ಆತನ ತಮ್ಮ ಬೇರೆಯಾದ ಬಗ್ಗೆ ಪಾಲುವಿಭಾಗ ಪತ್ರ ನನ್ನ ತಂದೆಯ ಬಳಿ ಇರಬಹುದು. ಈ ಪಾಲುವಿಭಾಗ ಪತ್ರವನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ. ನಾನು ಈ ಪಾಲುವಿಭಾಗ ಪತ್ರದ ಪ್ರಕಾರ ಯಾವ ಯಾವ ಆಸ್ತಿ ಕುರಿತು ಪಾಲು ಆಗಿತ್ತು ಎಂದು ತಿಳಿದುಕೊಂಡಿದ್ದೇನೆ.

ಸರ್ವೆ ನಂಬರ್ 32 ಮತ್ತು 33 ರಲ್ಲಿ ನನ್ನ ತಂದೆಗೆ ಹಿಸ್ಸೆ ಬಂದಿರುತ್ತದೆ. ಈ ಪಾಲುವಿಭಾಗ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನನ್ನ ಮದುವೆ 1987-88 ರಲ್ಲಿ ಆಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಗಂಡ ಕೃಷಿ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ಗಂಡನಿಗೆ 50 ಎಕರೆ ಜಮೀನು ಇತ್ತು. ನನ್ನ ಗಂಡನಿಗೆ 50 ಎಕರೆ ಜಮೀನು ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ಮದುವೆಯಾದ ನಂತರ ಸಹ ನನ್ನ ತಂದೆಯ ಜೊತೆಗೆ ಬಾಂಧವ್ಯ ಚೆನ್ನಾಗಿ ಇತ್ತು ಎಂದರೆ ಸರಿ. ನನ್ನ ತಾಯಿಗೆ ಸರ್ವೆ ನಂಬರ್ 32/2 ಐಟಂ ನಂಬರ್ 4 ಆಸ್ತಿ ಯಾವ ರೀತಿ ಬಂತು ಎಂದು ತೋರಿಸಲು ದಾಖಲೆ ತೆಗಿಸಿಕೊಂಡಿದ್ದೇನೆ. ನನ್ನ ತಾಯಿಯ ತಂದೆಯ ಹೆಸರು ವೆಂಕಟರತ್ನಂ ಎಂದು ಇರುತ್ತದೆ. ಮರಿಡಯ್ಯ ಎಂದರೆ ನನ್ನ ತಂದೆಯ ತಂದೆ. ಸಾಕ್ಷಿಗೆ ಒಂದು ಮುಟೇಷನ್ ಎಂಟ್ರಿಯ ದೃ.ನಕಲನ್ನು ತೋರಿಸಿ 1992-93 ರಲ್ಲಿ MR No.55 ರ ಪ್ರಕಾರ ನನ್ನ ತಾಯಿಗೆ ವರ್ಗಾವರ್ಗಿ ದಾಖಲೆಯ ಪ್ರಕಾರ ಈ ಜಮೀನು ಬಂತು ಎಂದು ಇದೆ ಎಂದರೆ ಸರಿ. ಸಾಕ್ಷಿ ನನ್ನ ತಂದೆಯಿಂದ ಬಂದಿದ್ದು ಎಂದು ಹೇಳುತ್ತಾರೆ. ಸದರಿ ಮುಟೇಷನ್ ಎಂಟ್ರಿಯನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಐಟಂ ನಂಬರ್ 4 ಆಸ್ತಿಯನ್ನು ನನ್ನ ತಂದೆ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದು ವಾದಪತ್ರದಲ್ಲಿ ತಿಳಿಸಿದ್ದು, ಈ ಕುರಿತು ಕ್ರಯಪತ್ರ ನೋಡಿರುತ್ತೀರಾ ಎಂದರೆ ಸಾಕ್ಷಿ ದಾಖಲೆ ಮನೆಯಲ್ಲಿ ಇವೆ ಎಂದು ಹೇಳುತ್ತಾರೆ. ನನ್ನ ತಂದೆ ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿ ಮಾಡಿದ್ದಾರೆ ಎಂದು ತೋರಿಸಲು ಯಾವುದೇ ಕ್ರಯಪತ್ರ ಈ ದಾವೆಯಲ್ಲಿ ಹಾಜರುಪಡಿಸಿಲ್ಲ

ಎಂದರೆ ಸರಿಯಲ್ಲ.

ನನ್ನ ತಾಯಿಗೆ ಈ ಐಟಂ ನಂಬರ್ 4 ಆಸ್ತಿ ಆಕೆಯ ಚಿಕ್ಕಪ್ಪನಿಂದ ವರ್ಗಾವರ್ಗಿ ಮುಖಾಂತರ ಬಂದ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆ ಈ ಜಮೀನನ್ನು ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡದೇ ಇದ್ದ ಕಾರಣ, ಈ ದಾವಾ ಆಸ್ತಿಯ ಕ್ರಯಪತ್ರವನ್ನು ನಾವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅರಸಾಪುರ ಕ್ಯಾಂಪ್ ನಲ್ಲಿ ನನ್ನ ಸ್ವಂತ ಮನೆ ಇದೆ ಎಂದರೆ ಸಾಕ್ಷಿ ನನ್ನ ಮಾವನವರದು ಎಂದು ಹೇಳುತ್ತಾರೆ. ನಾನು ಈಗ ದಾವಣಗೆರೆ ಶಹರದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. 10 ವರ್ಷಗಳಿಂದ ದಾವಣಗೆರೆಯಲ್ಲಿ ವಾಸ ಮಾಡುತ್ತಿದ್ದೇನೆ. ಅರಸಾಪುರ ಗ್ರಾಮದಲ್ಲಿ ನನ್ನ ಹೆಸರಿಗೆ ಜಮೀನು ಇದೆ ಎಂದರೆ ಸರಿ. ಸಾಕ್ಷಿ ನನ್ನ ಮಾವ ನನ್ನ ಮತ್ತು ನನ್ನ ಗಂಡನ ಹೆಸರಿಗೆ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಹೆಸರಿಗೆ ಎಷ್ಟು ಎಕರೆ ಜಮೀನು ಇದೆ ಎಂದು ನನ್ನ ಗಂಡನಿಗೆ ಗೊತ್ತು. ಸಾಕ್ಷಿಗೆ ಸರ್ವೆ ನಂಬರ್ 50/4 ರ ಪಹಣಿ ತೋರಿಸಿ ಈ ಜಮೀನಿಗೆ ನನ್ನ ಹೆಸರು ದಾಖಲು ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಈ ಆಸ್ತಿಯನ್ನು ನನ್ನ ಮಾವ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ಅದೇ ರೀತಿ ಸರ್ವೆ ನಂಬರ್ 48/3 ಇದು ಸಹ ನನ್ನ ಮತ್ತು ನನ್ನ ಗಂಡನ ಹೆಸರಿನಲ್ಲಿ ಜಂಟಿಯಾಗಿ ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಡಿ-3 ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂಬರ್ 48/2 ಮತ್ತು 48/4 ಇವು ಸಹ ನನ್ನ ಮತ್ತು ನನ್ನ ಗಂಡನ ಹೆಸರಿನಲ್ಲಿ ಜಂಟಿಯಾಗಿ ಖಾತೆ ಇವೆ ಎಂದರೆ ಸರಿ. ಸದರಿ ಪಹಣಿಗಳನ್ನು ಕ್ರಮವಾಗಿ ನಿ.ಡಿ-4 ಮತ್ತು 5 ಎಂದು ಗುರುತಿಸಲಾಯಿತು. ಇವುಗಳನ್ನು ನನ್ನ ಮಾವ ನಮ್ಮ ಹೆಸರಿಗೆ ಮಾಡಿರುತ್ತಾರೆ. ಈ ಜಮೀನುಗಳನ್ನು ಯಾವ ಇಸವಿಯಲ್ಲಿ ಮತ್ತು ಯಾರಿಂದ ಖರೀದಿ ಮಾಡಿದೆವು ಎಂದು ತೋರಿಸಲು

ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನನ್ನ ಹೆಸರಿಗೆ ಸುಮಾರು 15 ಎಕರೆ ಜಮೀನು ಇದೆ. ಸಾಕ್ಷಿ ನನ್ನ ಮತ್ತು ನನ್ನ ಗಂಡನ ಹೆಸರಿಗೆ ಇದೆ ಎಂದು ಹೇಳುತ್ತಾರೆ. ನನ್ನ ತಂದೆ ಅವರ ದುಡಿಮೆ ಮತ್ತು ವರಮಾನದಿಂದ ನನ್ನ ಮತ್ತು ನನ್ನ ಗಂಡನ ಹೆಸರಿಗೆ ಇರುವ ಎಲ್ಲಾ ಆಸ್ತಿಗಳನ್ನು ನಮಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಗಂಡನ ತಂದೆಗೆ ಇಷ್ಟು ಜಮೀನನ್ನು ಖರೀದಿ ಮಾಡುವ ಹಣಕಾಸಿನ ಸಾಮಾರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಇರುವ ಎಲ್ಲಾ ಜಮೀನುಗಳು ನೀರಾವರಿ ಜಮೀನುಗಳು ಎಂದರೆ ಸರಿ. ಈ ಜಮೀನುಗಳಲ್ಲಿ ಭತ್ತ ಮತ್ತು ಅಡಿಕೆ ಇದೆ. 4 ವರ್ಷಗಳ ಹಿಂದೆ ಅಡಿಕೆ ಹಾಕಿದ್ದೇವೆ. ದಾವಣಗೆರೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೇವೆ. ದಾವಣಗೆರೆಯಲ್ಲಿ ನನ್ನ ಹೆಸರಿಗೆ ಯಾವುದೇ ನಿವೇಶನ ಇಲ್ಲ. ನನ್ನ ತಂಗಿ, 2 ನೇ ಪ್ರತಿವಾದಿ ಜನಿಸಿದ ನಂತರ ಹುಟ್ಟಿದ್ದು ಎಂದರೆ ಸರಿ. ನನ್ನ ಮತ್ತು ನನ್ನ ತಂಗಿಯ ಮದುವೆ ನಾವು 18-19 ವರ್ಷ ವಯಸ್ಸಿನವರು ಇದ್ದಾಗ ಆಗಿದೆ ಎಂದರೆ ಸರಿ. ನನ್ನ ತಂಗಿ ಮತ್ತು ಆಕೆಯ ಗಂಡ ಅರಸಾಪುರ ಗ್ರಾಮದಲ್ಲಿ ವಾಸ ಇದ್ದರು ಎಂದರೆ ಸರಿ. ನನ್ನ ಮತ್ತು ನನ್ನ ತಂಗಿಯನ್ನು ಅಣ್ಣ ತಮ್ಮ ಇವರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ.

2 ನೇ ವಾದಿಗೆ ದಾವಣಗೆರೆ ಶಹರದಲ್ಲಿ ಮನೆ ಇದೆ ಎಂದರೆ ಸರಿ. ಸುಮಾರು 6 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ಆಗ ನನ್ನ ತಂದೆ ಬದುಕಿದ್ದರು. ನನ್ನ ತಂಗಿಯ ಗಂಡನ ಹೆಸರು ಗೋಪಾಲಕೃಷ್ಣ ಎಂದರೆ ಸರಿ. ಸರ್ವೆ ನಂಬರ್ 50/3, 50/7, 50/8 ಮತ್ತು 50/9 ಇವು ನನ್ನ ತಂಗಿಯ ಹೆಸರನಲ್ಲಿ ಇವೆ ಎಂದರೆ ಸರಿ. ಸಾಕ್ಷಿ ನನ್ನ ಮಾವ ಹೆಣ್ಣು ಮಕ್ಕಳ ಹೆಸರಿನಲ್ಲಿ ಆಸ್ತಿ ಇರಬೇಕು ಎಂದು ಮಾಡಿಸಿದ್ದು ಎಂದು ಹೇಳುತ್ತಾರೆ. ಸದರಿ ಪಹಣಿಗಳನ್ನು ನಿ.ಡಿ-6 ರಿಂದ 9 ಎಂದು

ಗುರುತಿಸಲಾಯಿತು. ಸರ್ವೆ ನಂಬರ್ 50/6 ಇದು ನನ್ನ ತಂಗಿ ಮತ್ತು ಆಕೆಯ ಗಂಡನ ಹೆಸರಿನಲ್ಲಿ ಜಂಟಿಯಾಗಿ ಖಾತೆ ಇದೆ ಎಂದರೆ ಸರಿ. ಸದರಿ ಪಹಣಿಯನ್ನು ನಿ.ಡಿ-10 ಎಂದು ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂಬರ್ 50/2 ಇದು ಸಹ ನನ್ನ ತಂಗಿ ಮತ್ತು ಆಕೆಯ ಗಂಡನ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ನನ್ನ ಮಾವ ಮಾಡಿಸಿದ್ದು ಎಂದು ಹೇಳುತ್ತಾರೆ. ಸದರಿ ಪಹಣಿಯನ್ನು ನಿ.ಡಿ-11 ಎಂದು ಗುರುತಿಸಲಾಯಿತು.

**ಮುಂದಿನ ಪಾಟೀ ಸವಾಲಿಗೆ ಪ್ರತಿವಾದಿಯರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.